**<u>ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 09-02-2024.</u>**

**<u>ಪಾಟೀ ಸವಾಲುಃ ಎದುರದಾರ ಪರ ಶ್ರೀ.ಕೆ ಜಿ ಕೆ ವಕೀಲರಿಂದಃ</u>**

1. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದೂರನ್ನು ನನ್ನ ತಂದೆ ಕೊಟ್ಟಿದ್ದರು. ಅಪಘಾತವಾದ ದಿನಾಂಕ ನೆನಪಿಲ್ಲ. ನನ್ನ ತಂದೆ ಕೊಟ್ಟ ದೂರನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಅಪಘಾತವಾದ ದಿನ ದೂರು ದಾಖಲಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಆ ದಿನ ಆಸ್ಪತ್ರೆಯಲ್ಲಿ ದಾಖಲು ಇದ್ದೆ ಎಂದು ಹೇಳುತ್ತಾರೆ. ಅಪಘಾತವಾವು ಗಣೆಬೈಲ ಊರಿನ ನಂತರ ಆಗಿದೆ. ಅಪಘಾತಪಡಿಸಿದ ವಾಹನದ ನಂಬರ ಗೊತ್ತಿಲ್ಲ. ಆದರೆ ಸ್ಪೆಲೆಂಡರ ದ್ವಿಚಕ್ರ ವಾಹನ ಆಗಿತ್ತು. ಅಪಘಾತವಾದ ದಿನ ನಾವು ಬೆಳಗಾವಿಯಿಂದ ಕೆಲಸ ಮುಗಿಸಿಕೊಂಡು ಖಾನಾಪೂರಕ್ಕೆ ಬರುತ್ತಿದ್ದೆವು. ಹೆದ್ದಾರಿ ಆಗಿದ್ದರಿಂದ ನಾವು ಆ ದಿನ ಅತೀ ಜೋರಾಗಿ ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದೆವು ಅಂದರೆ ಸರಿಯಲ್ಲ. ಯಾವ ವಾಹನದ ತಪ್ಪಿ ನಿಂದ ಸದರಿ ದಿನ ಅಪಘಾತವಾಗಿತ್ತು ಎಂದು ಹೇಳಲು ಬರುವುದಿಲ್ಲ, ನಾನು ದ್ವಿಚಕ್ರ ವಾಹನದ ಹಿಂದಿನ ಸೀಟಿನಲ್ಲಿ ಕುಳಿತ್ತಿದ್ದೆ. ಎದುರಿನಿಂದ ಬರುತ್ತಿದ್ದ ಸ್ಪೆಲೆಂಡರ ವಾಹನ ಚಾಲಕ ಹೆಸರು ಗೊತ್ತಿಲ್ಲ. ನಾನು ಕುಳಿತಿದ್ದ ದ್ವಿಚಕ್ರ ವಾಹನ ಚಾಲಕನ

ತಪ್ಪಿನಿಂದ ಆ ದಿನ ಅಪಘಾತವಾಗಿದ್ದು ಸ್ಪೆಲೆಂಡರ ವಾಹನ ಚಾಲಕನ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ.

2. ಅಪಘಾತದ ನಂತರ ನನಗೆ ಪ್ರಜ್ಞೆ ಇರಲಿಲ್ಲ ಆಸ್ಪತ್ರೆಗೆ ಯಾರು ದಾಖಲು ಮಾಡಿದರು ಗೊತ್ತಿಲ್ಲ. ನಾನು ಪೇಂಟಿಂಗ ಕೆಲಸ ಮಾಡುತ್ತಿದ್ದೆ. ನಾನು ಪೇಂಟಿಂಗ್ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ. ನನ್ನ ಶಾಲೆಯ ದಾಖಲೆ ಹಾಜರು ಮಾಡಿಲ್ಲ. ನನ್ನ ವಯಸ್ಸು ಅಪಘಾತದ ಸಮಯದಲ್ಲಿ 24 ವರ್ಷ ಇತ್ತು. ನನಗೆ ಅಪಘಾತದ ಸಮಯದಲ್ಲಿ 24 ವರ್ಷ ವಯಸ್ಸು ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನಿಜವಾದ ವಯಸ್ಸು ಗೊತ್ತಾಗುತ್ತದೆ ಎಂದು ನಾನು ಶಾಲಾ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

3. ನನಗೆ ಪ್ರಜ್ಞೆ ಬಂದಾಗ ನಾನು ಕೆಎಲ್ ಇ ಆಸ್ಪತ್ರೆಯಲ್ಲಿ ಇದ್ದೆ. ಅಲ್ಲಿ ನಾನು ಸುಮಾರು 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದ ಕುರಿತು ಆಸ್ಪತ್ರೆಯ ಬಿಡುಗಡೆ ಪತ್ರ ಹಾಜರು ಮಾಡಿದ್ದೇನೆ. 4 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ

ಈಗಲು ಪೆಂಟಿಂಗ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ತಲೆಗೆ ಪೆಟ್ಟಾಗಿದ್ದು ಪೆಂಟೆಂಗ ಕೆಲಸ ಮಾಡಲು ಆಗುತ್ತಿಲ್ಲ ಎಂದು ಹೇಳುತ್ತಾರೆ. ನಾನು ಪೆಂಟಿಂಗ ಕೆಲಸ ಮಾಡುತ್ತಿಲ್ಲ ಎಂದು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಔಷಧಿ ಚೀಟಿಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಜೊತೆ ಶಾಮಿಲು ಮಾಡಿಕೊಂಡು ಸುಳ್ಳು ವರದಿಗಳನ್ನು ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ವೈದ್ಯರೊಂದಿಗೆ ಶಾಮಿಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದ ದ್ವಿಚಕ್ರ ವಾಹನ ಚಾಲಕನ ತಪ್ಪಿ ನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** ಎದುರದಾರ ನಂ.4 ರ ಪರ ವಕೀಲರು ಗೈರು ಹಾಜರು ಇದ್ದು ಆದ್ದರಿಂದ ಪಾಟೀ ಸವಾಲಗಾಗಿ ಮುಂದುಡಲಾಯಿತು.

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**